ಶ್ರೀ ಜೀವರಾಜ ಆಳ್ವ —ನಾನು ಮೊದಲೇ ಹೇಳಿದ್ದೇನೆ. ಶಿವಪ್ಪನಾಯ್ಕನ ಅರಮನೆ ಮತ್ತು ಕೋಟೆಯನ್ನು ಸರ್ಕಾರದ ಪುರಾತತ್ವ ಸರ್ವೇಕ್ಷಣ ಇಲಾಖೆಯ ಬೆಂಗಳೂರು ವೃತ್ತವು ಸಂರಕ್ಷಿಸುತ್ತಿದೆ. ಹಾಗೂ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಬಗ್ಗೆ ಮಾಹಿತಿ ಇಲ್ಲ. ಅದನ್ನು ಸದಸ್ಯರಿಗೆ ನಾನು ಒದಗಿಸಿಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಇವತ್ತು ಏನು ''ನಗರ'' ಹಾಗೂ ''ಕಾಲೇದುರ್ಗ''ಗಳನ್ನು ರಾಷ್ಟ್ರೀಯ ಸ್ಮಾರಕಗಳನ್ನಾಗಿ ಮಾಡಬೇಕು.

ಶ್ರೀ ಜೀವರಾಜ ಆಳ್ವ.—ಅಲ್ಲಿ ನಾಯಕರ ಕಾಲದ ಕೆಲವು ಸ್ಮಾರಕಗಳನ್ನು ಗುರ್ತು ಮಾಡಿ ಒಂದು ತೀರ್ಮಾನ ತೆಗೆದುಕೊಂಡು ಈ ಸಾರಿ ಪುರಾತತ್ವ ಇಲಾಖೆಯ ಶತಮಾನ ವರ್ಷದ ಅಂಗವಾಗಿ ಶಿವಮೊಗ್ಗದ ಶಿವಪ್ಪನಾಯ್ಕರ ಅರಮನೆಯನ್ನು ದುರಸ್ತು ಮಾಡಲಾಗುತ್ತಿದ್ದು, ದುರಸ್ತಿಯಾದ ತಕ್ಷಣ ಅದನ್ನು ಉದ್ಘಾಟನೆ ಮಾಡಬೇಕೆಂದು ಇದ್ದೇವೆ. ಇಂತಹ ಸ್ಥಳಗಳನ್ನು ಗುರುತಿಸಿ ನಮ್ಮ ಇಲಾಖೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ''ಕಾಲೇದುರ್ಗ' ಶಿವಪ್ಪನಾಯಕನ ಅರಮನೆ ಇರುವ ಸ್ಥಳ. ಇಲ್ಲಿಗೆ ಹೆಚ್ಚು ಪ್ರವಾಸಿಗಳು ಭೇಟಿ ಕೊಡುತ್ತಿದ್ದಾರೆ. ಹಾಗೂ ನಗರದಲ್ಲಿ ಶಿವಪ್ಪನಾಯಕರ ಕೋಟೆ ಇದೆ. ಇವನ್ನೆಲ್ಲಾ ಸಂರಕ್ಷಿಸಿ ಅಭಿವೃದ್ಧಿ ಮಾಡಿದರೆ ಇವುಗಳು ರಾಷ್ಟ್ರೀಯ ಸ್ಮಾರಕಗಳಾಗುವುದರಲ್ಲಿ ಸಂದೇಹವಿಲ್ಲ. ಕಾಲೇದುರ್ಗವನ್ನು ಐತಿಹಾಸಿಕ ಸ್ಮಾರಕವೆಂದು ಉಳಿಸಿಕೊಂಡು ಅಭಿವೃದ್ಧಿ ಮಾಡಬೇಕು.

ಶ್ರೀ ಜೀವರಾಜ ಆಳ್ವ.— ಹೊಸನಗರದ ಅರಮನೆಯನ್ನು ಕೇಂದ್ರ ಪುರಾತತ್ವ ಇಲಾಖೆ ವಹಿಸಿಕೊಂಡಿದೆ. ಇನ್ನು ಕಾಲೇದುರ್ಗದ ಬಗ್ಗೆ ಏನು ಸದಸ್ಯರು ಸಲಹೆ ಕೊಟ್ಟಿದ್ದಾರೆ ಆ ಬಗ್ಗೆ ಸರ್ಕಾರ ಗಮನ ಇಟ್ಟುಕೊಳ್ಳುತ್ತದೆ.

ಗುಂಬ್ಜ ಮತ್ತು ಕೊರಟಗೆರೆಯಲ್ಲಿ ನಡೆದ ಕೊಲೆ ಹಾಗೂ ದರೋಡೆ

೭೧೪. ಶ್ರೀ ಜಿ. ಎಸ್. ಶಿವನಂಜಪ್ಪ (ಗುಂಬ್ಜ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗೃಹ ಸಚಿವರು ದಯೆಯಿಟ್ಟು ಉತ್ತರಿಸುವರೆ ?

(ಅ) ಗುಂಬ್ಜ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಈಗ್ಗೆ ೩ ವರ್ಷಗಳಿಂದ ನಡೆದಿರುವ ಕೊಲೆ ಹಾಗೂ ದರೋಡೆ ಪ್ರಕರಣಗಳ ಸಂಖ್ಯೆ ಎಷ್ಟು, (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

(ಆ) ಕೊಲೆಯಾದವರ ಪೈಕಿ ಹರಿಜನ ಗಿರಿಜನರೆಷ್ಟು,

(ಇ) ಮೇಲ್ಕಂಡ ಪ್ರಕರಣಗಳ ಬಗ್ಗೆ ಕೈಗೊಂಡಿರುವ ಶ್ರವಂಗಳೇನು ಮತ್ತು ಆ ಪೈಕಿ ಯಾವು ದಾದರೂ ಪತ್ತೆಯಾಗಿವೆಯೆ ?

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—

(ಅ)

ಗುಂಬ್ಜ ತಾಲ್ಲೂಕು		ಕೊರಟಗೆರೆ ತಾಲ್ಲೂಕು
ಕೊಲೆ	೧೫	೧೦
ದರೋಡೆ	೭	ಇಲ್ಲ

(ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ ೧ರಲ್ಲಿ ಸೂಚಿಸಿದೆ)

(ಆ)

ಗುಂಬ್ಜ ತಾಲ್ಲೂಕು		ಕೊರಟಗೆರೆ ತಾಲ್ಲೂಕು
ಹರಿಜನ	೨	೨
ಗಿರಿಜನ	—	೧

ವರದಿಯಾದ ಎಲ್ಲಾ ಕೊಲೆ ಮತ್ತು ದರೋಡೆ ಪ್ರಕರಣಗಳನ್ನು ಕೂಲಂಕೂಷವಾಗಿ ತನಿಖೆ ಮಾಡಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿದೆ.

(ವಿವರಗಳನ್ನು ಅನುಬಂಧ ೨ರಲ್ಲಿ ಕೊಡಲಾಗಿದೆ.)

ಅನುಬಂಧ–೧

ವರ್ಷ	ಗುಬ್ಬಿ ತಾಲ್ಲೂಕು		ಕೊರಟಗೆರೆ ತಾಲ್ಲೂಕು	
	ಕೊಲೆ	ದರೋಡೆ	ಕೊಲೆ	ದರೋಡೆ
೧೯೮೨	೨	—	೨	—
೧೯೮೩	೧	೬	೫	—
೧೯೮೪	೯	೧	೧	—
೧೯೮೫ ಜೂನ್‌ವರೆಗೆ	೩	—	೨	—
ಒಟ್ಟು	೧೫	೭	೧೦	

ಅನುಬಂಧ–೨

ಗುಬ್ಬಿ ತಾಲ್ಲೂಕು

ವರ್ಷ	ಕೊಲೆ ಪ್ರಕರಣಗಳು	ಡಕಾಯಿತಿ ಪ್ರಕರಣಗಳು
೧೯೮೨	೨ ಕೊಲೆ ಪ್ರಕರಣಗಳಲ್ಲಿ ಒಂದು ನ್ಯಾಯಾಲಯದಲ್ಲಿ ವಿಚಾರಣೆಯಲ್ಲದೆ, ಇನ್ನೊಂದು ಪ್ರಕರಣದಲ್ಲಿ 'ಬಿ' ವರದಿಯಾಗಿದೆ.	೧೯೮೨—ಇಲ್ಲ
೧೯೮೩	ಒಂದೇ ಒಂದು ಪ್ರಕರಣವು ವರದಿಯಾಗಿದ್ದು, ಅದನ್ನು ಪತ್ತೆಯಾಗಲಿಲ್ಲವೆಂದು ಪರಿಗಣಿಸಲ್ಪಟ್ಟಿದೆ.	೧೯೮೩ ಎಲ್ಲಾ ಆರು ಪ್ರಕರಣಗಳ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿವೆ.
೧೯೮೪	ಒಟ್ಟು ೯ ಪ್ರಕರಣಗಳಲ್ಲಿ ೬ ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿವೆ. ೧ ವಜಾ ಆಗಿದ್ದು, ೨ ತನಿಖೆಯಲ್ಲಿವೆ.	೧೯೮೪ ಒಂದು ಪ್ರಕರಣವು ವರದಿಯಾಗಿದ್ದು, ಅದು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ.
೧೯೮೫ (ಜೂನ್‌ವರೆಗೆ)	ಎಲ್ಲಾ ೩ ಪ್ರಕರಣಗಣಗಳು ತನಿಖೆಯಲ್ಲಿವೆ.	೧೯೮೫ — ಇಲ್ಲ

ಕೊರಟಗೆರೆ ತಾಲ್ಲೂಕು

೧೯೮೨	೨ ಕೊಲೆ ಪ್ರಕರಣಗಳಲ್ಲಿ 'ಬಿ' ವರದಿಯಾಗಿದೆ.	೧೯೮೨ — ಇಲ್ಲ
೧೯೮೩	೫ ಕೊಲೆ ಪ್ರಕರಣಗಳಲ್ಲಿ ೪ ಪ್ರಕರಣಗಳು ನ್ಯಾಯಾಲಯಗಳಲ್ಲಿವಿಚಾರಣೆಯಲ್ಲಿವೆ. ಮತ್ತು ಒಂದು ಪ್ರಕರಣದಲ್ಲಿ 'ಬಿ' ವರದಿಯಾಗಿದೆ.	೧೯೮೩ — ಇಲ್ಲ
೧೯೮೪	ಒಂದು ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ	೧೯೮೪ — ಇಲ್ಲ
೧೯೮೫ (ಜೂನ್ ವರೆಗೆ)	೨ ಪ್ರಕರಣಗಳು ವರದಿಯಾಗಿದ್ದು. ಒಂದು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು, ಇನ್ನೊಂದು ತನಿಖೆಯಲ್ಲಿದೆ.	೧೯೮೫ — ಇಲ್ಲ

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ಈ ಎರಡೂ ತಾಲ್ಲೂಕುಗಳಲ್ಲಿ ಪೋಲೀಸರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿಲ್ಲ ಆದದ್ದರಿಂದ ಕೂಡಲೇ ಇವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮಗೆ ಅನೇಕ ದೂರುಗಳು ಸಾರ್ವಜನಿಕರಿಂದ ಬಂದಿವೆಯೆಂದು ತಿಳಿದು ಬಂದಿದೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಕಳೆದ ೩ ವರ್ಷಗಳಲ್ಲಿ ಆಗಿರತಕ್ಕ ಕೊಲೆಗಳ ಸಂಖ್ಯೆ ೧೫. ಇದರಲ್ಲಿ ಗುಬ್ಬಿ ತಾಲ್ಲೂಕಿನಲ್ಲಿ ಎರಡು ಪ್ರಕರಣಗಳಲ್ಲಿ ಹರಿಜನರ ಕೊಲೆಯಾಗಿದೆ ಎಂದು ತಿಳಿದುಬಂದಿದೆ. ಆ ಎರಡೂ ಪ್ರಕರಣಗಳು ಪತ್ತೆಯಾಗಿದೆ. ಅಂದಮೇಲೆ ಪೋಲೀಸರು ಸರಿಯಾಗಿ ಕೆಲಸ ನಿರ್ವಹಿಸಿದ್ದಾರೆಂದು ತಿಳಿದುಬರುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ಈ ಕೊಲೆಗೆ ಸಂಬಂಧಪಟ್ಟಂತೆ ಐ.ಜಿ.ಪಿ.ಯವರಿಗೂ ಗೃಹ ಕಾರ್ಯದರ್ಶಿಯವರಿಗೂ ಮತ್ತು ತಮಗೂ ಈಗ್ಗೆ ಸುಮಾರು ಒಂದೂವರೆ ತಿಂಗಳ ಹಿಂದೆ ಪತ್ರಗಳನ್ನು ಬರೆದಿದ್ದೇನೆ. ಆದರೆ ಒಬ್ಬರಿಂದಲೂ ನನಗೆ ಉತ್ತರವೇ ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಬಂದಿಲ್ಲವೇ, ಹಾಗಾದರೆ ಪರಿಶೀಲಿಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ೧೯೮೨ರಲ್ಲಿ ೨ ಕೊಲೆ ಪ್ರಕರಣಗಳಾಗಿದ್ದು ಒಂದು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ, ಇನ್ನೊಂದು ಪ್ರಕರಣದಲ್ಲಿ ಛಾರ್ಜ್ ಷೀಟ್ ಹಾಕಲಾಗಿದೆ ಎಂದು ಹೇಳಿದ್ದೀರಿ. ಹಾಗಾದರೆ ಇದರಲ್ಲಿ ಏಕೆ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ ಬಿ. ರಾಚಯ್ಯ.— ೧೯೮೨ರಲ್ಲಿ ೨ ಕೊಲೆ ಪ್ರಕರಣಗಳಲ್ಲಿ ಒಂದು ನ್ಯಾಯಾಲದಲ್ಲಿ ವಿಚಾರಣೆಯಲ್ಲಿದೆ, ಇನ್ನೊಂದು ಪ್ರಕರಣದಲ್ಲಿ 'ಬಿ' ವರದಿಯಾಗಿದೆ ೧೯೮೩ರಲ್ಲಿ ಒಂದೇ ಒಂದು ಪ್ರಕರವೆ ವರದಿಯಾಗಿದ್ದು ಅದನ್ನು ಪತ್ತೆಯಾಗಲಿಲ್ಲವೆಂದು ಪರಿಗಣಿಸಲ್ಪಟ್ಟಿದೆ. ೧೯೮೪ರಲ್ಲಿ ಒಟ್ಟು ೯ ಪ್ರಕರಣಗಳಲ್ಲಿ ೬ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ, ೧ ವಜಾ ಆಗಿದ್ದು, ೨ ತನಿಖೆಯಲ್ಲಿವೆ. ೧೯೮೫ರಜೂನ್‌ವರೆಗೆ ಎಲ್ಲಾ ೩ ಪ್ರಕರಣಗಳೂ ತನಿಖೆಯಲ್ಲಿವೆ ಎಂದು ಪೂರ್ಣ ವಿವರವನ್ನು ತಮಗೆ ನೀಡಿದ್ದೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—೧೯೮೪ನೇ ಸಾಲಿನಲ್ಲಿ ೯ ಪ್ರಕರಣಗಳ ಪೈಕಿ ೬ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿದ್ದು, ೧ ವಜಾ ಆಗಿದ್ದು, ಉಳಿದೆರಡು ತನಿಖೆಯಲ್ಲಿವೆ ಎಂದು ಹೇಳಿದ್ದೀರಿ. ಈ ಎರಡನ್ನೂ ಏತಕ್ಕೆ ಪೂರ್ಣ ಮಾಡಲಿಲ್ಲ ?

ಶ್ರೀ ಬಿ. ರಾಚಯ್ಯ.—ಇದಕ್ಕೆ ಕಾರಣ ಎಂದರೆ, ಅಪರಾಧ ರುಜುವಾತು ಆಗಬೇಕು, ಕೆಲವು ಸಂದರ್ಭಗಳಲ್ಲಿ ಕೊಲೆಯಾದುದನ್ನು ನೋಡಿದವರೂ ಕೂಡ ನಾನು ನೋಡಿದೆ ಎಂದು ಮುಂದೆ ಬಂದು ಸಾಕ್ಷ್ಯವನ್ನು ಹೇಳುವುದಿಲ್ಲ. ಇನ್ನೂ ಕೆಲವು ಕಾರಣಗಳಿಂದಾಗಿ ತನಿಖೆ ಆಗುವುದು ಸ್ವಲ್ಪ ತಡವಾಗಿದೆ.

ಶ್ರೀ ಜಿ. ಎಸ್. ಶಿವಸಂಜಪ್ಪ.—ಸ್ವಾಮಿ, ಇದರಲ್ಲಿ ನನಗೆ ಬಂದಿರತಕ್ಕ ಅನುಮಾನ ಎಂದರೆ ೧೯೮೪ನೇ ಇಸವಿಯಿಂದ ಇದುವರೆಗೂ ತನಿಖೆಯಾಗುತ್ತಿದೆ ಎಂದರೆ, ಕಾರಣವೇನು ? ಸಾಕ್ಷಿಗಳು ಬರಲಿಲ್ಲವೆ ? ಅಥವಾ ಅವರು ಎಲ್ಲಾದರೂ ತಪ್ಪಿಸಿಕೊಂಡು ಹೋಗಿದ್ದಾರೆಯೆ ? ಯಾವ ಕಾರಣಕ್ಕಾಗಿ ವರದಿ ನಿಧಾನವಾಯಿತು ಎನ್ನುವ ಬಗ್ಗೆ ವರದಿಯಾದರೂ ನಿಮ್ಮ ಹತ್ತಿರ ಇರಬೇಕಲ್ಲಾ. ಈ ಕೊಲೆಯ ವಿಚಾರದಲ್ಲಿ ದೊಡ್ಡ ದೊಡ್ಡ ಭಿತ್ತಿ ಪತ್ರಗಳನು ಪ್ರಿಂಟ್ ಮಾಡಿಸಿ ಹಂಚಿದ್ದಾರೆ, ಜೊತೆಗೆ ನೂರಾರು ಆರ್ಜಿಗಳನ್ನೂ ಕೂಡ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಅಲ್ಲದೆ ತಮಗೂ ಕೂಡ ಪತ್ರವನ್ನು ಬರೆದಿದ್ದಾರೆ. ಇದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ತಮ್ಮ ಹತ್ತಿರ ಹೆಚ್ಚಿನ ಮಾಹಿತಿಗಳೇನಾದರೂ ಇದ್ದರೆ ಅವುಗಳನ್ನು ನನ್ನ ಕಡೆಗೆ ಕಳುಹಿಸಿಕೊಟ್ಟರೆ ಈ ಕೊಲೆ ಪ್ರಕರಣವನ್ನು ಸುಲಭವಾಗಿ ಪತ್ತೆ ಹೆಚ್ಚುವುದಕ್ಕೆ ಅನುಕೂಲವಾಗುತ್ತದೆ.

೧೮೪. ಮಾನ್ಯ ಸದಸ್ಯರು ಹಾಜರಿಲ್ಲ.

ಶ್ರೀ ರೇಣುಕಾ ಯಲ್ಲಮ್ಮನ ಕ್ಷೇತ್ರವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು

೧೮೫. ಶ್ರೀ ಚಂದ್ರಶೇಖರ್ ಮಾಮನಿ (ಧಾರವಾಡ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ವಾರ್ತಾ, ಯುವಜನ ಸೇವೆ, ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಸವದತ್ತಿಯ ಶ್ರೀ ರೇಣುಕಾ ಎಲ್ಲಮ್ಮನ ಕ್ಷೇತ್ರ, ಮಲಪ್ರಭಾ ಆಣೆಕಟ್ಟು ಪ್ರದೇಶ ಹಾಗೂ ಸೊಗಲ ಕ್ಷೇತ್ರವನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಜೀವರಾಜ ಆಳ್ವ.—(ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆ ಮತ್ತು ಕನ್ನಡ ಸಂಸ್ಕೃತಿ ಹಾಗೂ ರಾಜ್ಯ ಸಚಿವರು).—

ಸೌಂದತ್ತಿಯ ಶ್ರೀ ರೇಣುಕಾ ಎಲ್ಲಮ್ಮ ಮತ್ತು ಸೊಗಲ ಕ್ಷೇತ್ರವು ದಾರ್ಮಿಕದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಮಲಪ್ರಭಾ ಜಲಾಶಯದಲ್ಲಿ ದೋಣಿ ವಿಹಾರವನ್ನು ಒದಗಿಸುವ ಯೋಜನೆಯನ್ನು ಪ್ರವಾಸೋದ್ಯಮ ಇಲಾಖೆಯು ನಿರೂಪಿಸುತ್ತಿದೆ.

ಶ್ರೀ ಚಂದ್ರಶೇಖರ ಮಾಮನಿ.—ಸ್ವಾಮಿ, ಶ್ರೀರೇಣುಕಾ ಎಲ್ಲಮ್ಮ ಮತ್ತು ಸೋಗಲ ಕ್ಷೇತ್ರಗಳು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತವೆಂದು ತಾವು ಹೇಳಿದಿರಿ. ಆದರೆ ನನ್ನ ಪ್ರಶ್ನೆ ಏನೆಂದರೆ, ಈ ಕ್ಷೇತ್ರಗಳನ್ನು ಪ್ರವಾಸೀ ಕೇಂದ್ರಗಳನ್ನಾಗಿ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ಸೌಂದತ್ತಿ ಮತ್ತು ರೇಣುಕ ಎಲ್ಲಮ್ಮ ಕ್ಷೇತ್ರಗಳನ್ನು ಪ್ರವಾಸೀ ಕೇಂದ್ರಗಳನ್ನಾಗಿ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದೇವೆ. ಇದರ ಜೊತೆಗೆ ಅಲ್ಲಿಗೆ ನೀರಿನ ಸೌಲಭ್ಯವನ್ನು ಒದಗಿಸಿಕೊಡುವಂತೆ ಅಲ್ಲಿನ ಜಿಲ್ಲಾಧಿಕಾರಿಯವರನ್ನು ಕೇಳಿದ್ದೇವೆ. ಮತ್ತು ಪ್ರವಾಸಿಗರಿಗೋಸ್ಕರ ಮಾರ್ಗದರ್ಶಕ ಸಿಬ್ಬಂದಿಯನ್ನೂ ಕೂಡ ನೇಮಕ ಮಾಡಿದ್ದೇವೆ.

ಶ್ರೀ ಚಂದ್ರಶೇಖರ ಮಾಮನಿ.—ಈ ಕೆಲಸವನ್ನು ಯಾವಾಗ ಮಾಡುತ್ತೀರಿ ?

ಶ್ರೀ ಜೀವರಾಜ ಆಳ್ವ.—ಸರ್ಕಾರಕ್ಕೆ ಸ್ವಲ್ಪ ಆರ್ಥಿಕ ಮುಗ್ಗಟ್ಟು ಇರುವುದರಿಂದ ಇದನ್ನು ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ಎಲ್ಲಮ್ಮನ ಕ್ಷೇತ್ರದಲ್ಲಿ ಬಹಳಷ್ಟು ಹಣ ಇದೆ. ಅದನ್ನು ತಾವೇ ತೆಗೆದುಕೊಂಡು ಎಲ್ಲ ಸೌಲಭ್ಯಗಳನ್ನೂ ಒದಗಿಸಿಕೊಟ್ಟರೆ ಯಾವ ಅಭ್ಯಂತರವೂ ಇಲ್ಲ. ಇದನ್ನು ಯೋಚನೆ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಚಂದ್ರಶೇಖರ್ ಮಾಮನಿ.—ಬ್ಯಂದಾವಸ ಮಾದರಿಯಲ್ಲಿ ಅಭಿವೃದ್ಧಿ ಮಾಡಲು ಸಾಧ್ಯವೇ?